**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು**

**ಸಿ.ಸಿ. 832/2020**

**ಸಿ.ಡಬ್ಲ್ಯೂ -2, ಪಿ.ಡಬ್ಲ್ಯೂ,2**

ದಿಃ **24.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | ನಂಜೇಗೌಡ |
| **ಗಂಡ/ತಂದೆಯ ಹೆಸರು** | **ಶಂಕರೇಗೌಡ** |
| **ವಯಸ್ಸು** | 52 ವರ್ಷ |
| **ಕೆಲಸ** | **ವ್ಯವಸಾಯ** |
| ವಾಸಸ್ಥಳ | ಸಿಂಗರಮಾರನಹಳ್ಳಿ |

**<u>ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿದ್ದಾರೆ. ಚಾಸಾ1 ನನ್ನ ಮಗಳು. ಚಾಸಾ 3 ರಿಂದ 5 ಗೊತ್ತು. ನಮ್ಮ ಮತ್ತು ಆರೋಪಿತರ ನಡುವೆ ಸಣ್ಣ ವಿಚಾರಕ್ಕೆ ಜಗಳವಾಗಿದ್ದು, ಈ ಬಗ್ಗೆ ಚಾಸಾ1 ರವರು ಪೊಲೀಸರಿಗೆ ಮೌಖಿಕವಾಗಿ ತಿಳಿಸಿದ್ದರು. ನಾನು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

<u>ಪಾಟೀ ಸವಾಲು ಮಾನ್ಯ ಎ.ಪಿ.ಪಿ ರವರಿಂದಃ</u>

ದಿಃ25.03.2020 ರಂದು ಚಾಸಾ1 ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ 1 ನೇ ಆರೋಪಿ ಏಕಾಏಕಿ ಮನೆಯೊಳಗೆ ಬಂದನು ಎಂದರೆ ಸರಿಯಲ್ಲ. ಅಷ್ಟರಲ್ಲಿ ಚಾಸಾ1 ರವರು ಕೂಗಿಕೊಂಡರು ಆತನು ಹೊರಟುಹೋದನು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ4 ಬಂದೆವು ಹಾಗೂ ನನಗೆ ಚಾಸಾ1 ರವರು ವಿಚಾರ ತಿಳಿಸಿದರು ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಗೆ ವಿಚಾರ ಕೇಳಲು ಹೋದಾಗ 1 ನೇ ಆರೋಪಿ ನನ್ನನ್ನು ತಳ್ಳಾಡುತ್ತಿದ್ದಾಗ 2 ನೇ ಆರೋಪಿ ಸ್ಥಳದಲ್ಲಿ ಬಿದ್ದಿದ್ದ ನನ್ನ ಬೆನ್ನಿಗೆ ಹೊಡೆದನು ಎಂದರೆ ಸರಿಯಲ್ಲ. ಆಗ ಚಾಸಾ3 ಮತ್ತು 4 ರವರು ಜಗಳವನ್ನು ಬಿಡಿಸಿ ಸಮಾಧಾನಪಡಿಸಿದರು ಎಂದರೆ ಸರಿಯಲ್ಲ. ಈಗ ಮೇಲೆ ಓದಿ ಹೇಳಿದ ಹಾಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ3 ಎಂದು ಗುರುತಿಸಲಾಯಿತು.

**<u>ಮರುವಿಚಾರಣೆ ಇಲ್ಲ.</u>**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.